೧೨ ಪಿರಿಯಾ ಪಟ್ಟಣ ತಾಲ್ಲೂಕಿಂ ಕಸಬಾ ಹೋಬಳಿ ಮಂತ್ರೂರು ಗಿರಿಜನ ಕಾಲೋನಿಯಲ್ಲಿ ವಾಸವಾಗಿರುವ ಗಿರಿಜನರಿಗೆ ೧೪೨ನೇ ಸರ್ವೆ ನಂಬರಿನಲ್ಲಿ ಮಂಜೂರಾಗಿದ್ದ ಜಮೀನನ್ನು ಕೊಡುವ ಬಗ್ಗೆ

ಶ್ರೀಮತಿ ಸರಮಾ ವಸಂತ್.—ಮಾನ್ಯ ಅಧ್ಯಕ್ಷರೇ, ಪಿರಿಯಾಪಟ್ಟಣ ತಾಲ್ಲೂಕಿಂ ಕಸಬಾ ಹೋಬಳಿ ಮಂತ್ರೂರು ಪಂಚಾಯಿತಿಗೆ ಸೇರಿದ ಮಂತ್ರೂರು ಗಿರಿಜನ ಕಾಲೋನಿಯಲ್ಲಿ ವಾಸವಾಗಿರುವ ಗಿರಿಜನರಿಗೆ ೧೪೨ನೇ ಸರ್ವೆ ನಂಬರಿನಲ್ಲಿ ಮಂಜೂರಾಗಿದ್ದ ಸಮಾರು ೧೫೦ ಎಕರೆ ಖುಷ್ಕಿ ಜಮೀನನ್ನು ತಲಾ ೫ ಎಕರೆಯಂತೆ ಸುಮಾರು ಹತ್ತು ವರ್ಷಗಳ ಹಿಂದೆಯೇ ಕೊಡಲಾಗಿದ್ದಿತು. ಆದರೆ ಈಗ ಐದು ಎಕರೆಗಳಿಗೆ ಬದಲಾಗಿ ಎರಡರಿಂದ ನಾಲ್ಕು ಎಕರೆಗಳವರೆಗೆ ಅಳತೆ ಮಾಡಿಕೊಡಲಾಗಿದ್ದು ೧೫೦ ಎಕರೆಗಳ ಬದಲಾಗಿ ೧೦೦ ಎಕರೆಗೆ ಇಳಿಸಿದ್ದು ಅಧಿಕಾರಿಗಳು ಬಡ ಗಿರಿಜನರಿಗೆ ಮೋಸ ಮಾಡಿದ್ದಾರೆ. ಇದಕ್ಕೆ ಅಲ್ಲಿನ ಸರ್ವೇಯರ್ ಮುಖ್ಯ ಕಾರಣರೆಂದು ತಿಳಿದು ಬಂದಿದೆ. ಈಗಾಗಲೇ ೩೦ ಮಂದಿ ಗಿರಿಜನರು ಸದರಿ ಜಮೀನನ್ನು ಸಾಗುವಳಿ ಮಾಡುತ್ತಿದ್ದು ನ್ಯಾಯವನ್ನು ದೊರಕಿಸಿಕೊಡಬೇಕೆಂದು ಕೋರಿ ಅನೇಕ ಬಾರಿ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದಾಗ್ಯೂ ಅದರಿಂದ ಯಾವ ಉಪಯೋಗವೂ ಆಗಿಲ್ಲದಿರುವುದರಿಂದ ಕೂಡಲೇ ಈ ಬಗ್ಗೆ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ಕೈಗೊಂಡು ಬಡ ಗಿರಿಜನರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದನ್ನು ಪರಿಶೀಲನೆ ಮಾಡಿ ಆದಷ್ಟು ಬೇಗ ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು.—ಶ್ರೀ ಎಸ್. ಎಸ್. ಕಡಪಟ್ಟಿ, ಗೈರುಹಾಜರಿ.

೧೩ ರಾಯಚೂರು ತಾಲ್ಲೂಕಿನ ರಘುನಾಥನ ಹಳ್ಳಿಯಲ್ಲಿ ಖಾಸಗಿಯವರ ನೀರಿನ ತೊಟ್ಟಿಯಲ್ಲಿ ವಿಷಮಿಶ್ರಿತ ನೀರನ್ನು ಕುಡಿದು ಜಾನುವಾರುಗಳು ಸ್ಥಳದಲ್ಲೇ ಸತ್ತಿರುವ ಬಗ್ಗೆ.

ಶ್ರೀ ಮಲ್ಲಾರಿಗೌಡ ಎಸ್ ಪಾಟೀಲ್.—ಮಾನ್ಯ ಅಧ್ಯಕ್ಷರೇ, ರಾಯಚೂರು ತಾಲ್ಲೂಕಿನ ರಘುನಾಥನ ಹಳ್ಳಿಯಲ್ಲಿ ಖಾಸಗಿಯವರೊಬ್ಬರಿಗೆ ಸೇರಿದ ನೀರಿನ ತೊಟ್ಟಿಯ ವಿಷಮಿಶ್ರಿತ ನೀರನ್ನು ಕುಡಿದು ಕನಿಷ್ಟ ಇಪ್ಪತ್ತು ಜಾನುವಾರುಗಳು ಸ್ಥಳದಲ್ಲೇ ಸತ್ತಿದ್ದು ಇತರ ಮೂವತ್ತು ಜಾನುವಾರುಗಳು ಪ್ರಾಣಾಪಾಯ ಸ್ಥಿತಿಯಲ್ಲಿರುವುದಾಗಿಯೂ ತಿಳಿದುಬಂದಿದೆ. ಕೃಷಿ ಕಾರ್ಮಿಕರು ನೀರಿನ ತೊಟ್ಟಿಗೆ ಅಂದ್ರಿ ಬೆರೆಸಿದ್ದರೆಂದೂ ಹಾಗೂ ಕೃಷಿ ಕಾರ್ಮಿಕರು ಆಚಾತುರ್ಯದಿಂದ ಈ ಘಟನೆ ಸಂಬಂಧಿಸಿದ್ದು ಜಾನುವಾರುಗಳನ್ನು ಆಸ್ಪತ್ರೆಗೆ ಸಾಗಿಸಲು ವಾಹನ ಸೌಕರ್ಯವೂ ಇರಲಿಲ್ಲವೆಂದು ತಿಳಿದು ಬಂದಿದೆ. ಸದರಿ ಜಾನುವಾರುಗಳು ಸುಲ್ತಾನ್‌ಪುರ ಗ್ರಾಮಕ್ಕೆ ಸೇರಿದ್ದು, ಅನೇಕರು ಸಾಲ ತೆಗೆದುಕೊಂಡು ಜಾನುವಾರುಗಳನ್ನು ಕೊಂಡಿದ್ದಾಗಿಯೂ ತಿಳಿದುಬಂದಿದೆ. ಆದ್ದರಿಂದ ಜಾನುವಾರುಗಳನ್ನು ಕಳೆದುಕೊಂಡು ರೈತರು ಸಾಲ ತೀರಿಸಬೇಕಾಗಿರುವುದರಿಂದ ಅವರಿಗೆ ಸೂಕ್ತ ಪರಿಹಾರ ನೀಡಲು ಕ್ರಮ ಕೈಗೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್ ಬೊಮ್ಮಾಯಿ.—ಇದನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಹೇಳುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

1987–88 ನೇ ವರ್ಷದ, ಕಾಮುಗಾರಿ ಮತ್ತು ನೀರಾವರಿ ಬೇಡಿಕೆಗಳ ಮೇಲೆ ಚರ್ಚೆ

ಅಧ್ಯಕ್ಷರು,—ಮಾನ್ಯ ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಸಚಿವರಿಂದ ಬೇಡಿಕೆಗಳ ಮಂಡನೆ.